ಕ್ರೈಸ್ತರಿಗೆ ಸ್ಮರಣೀಯ. ಪ್ರವಾದಿ ಮೊಹಮ್ಮದರು ಇಲ್ಲಿಂದಲೇ ನೇರ ದೇವರೆಡೆಗೆ ತೆರಳಿದರು. ಹೀಗಾಗಿ ಮೂರು ಧರ್ಮಗಳಿಗೆ ಇದು ಪವಿತ್ರ ತಾಣ.

ಜಗತ್ತಿನೆಲ್ಲೆಡೆಯಿಂದ ಬರುವ ಜನರಿಗೆ ಜೆರೂಸಲೇಮ್ ಧಾರ್ಮಿಕಇತಿಹಾಸದ ನೆನಪುಗಳನ್ನು ಮೊಗೆದು ಕೊಡುತ್ತದೆ. ಅಲ್ಲಿ ಕಾಲಿಗೆಟುಕುವ ಪ್ರತಿ ಕಲ್ಲಿನಲ್ಲೂ, ತಲೆಯೆತ್ತಿ ನೋಡಿದರೆ ಕಾಣುವ ಒಂದೊಂದು ಕಟ್ಟಡದಲ್ಲೂ ಇತಿಹಾಸ! ಜೆರೂಸಲೇಮ್ ಪ್ರವೇಶಿಸುವ ಮೊದಲು ಒಂದಷ್ಟು ಅಧ್ಯಯನ ಮಾಡಿದರೆ ಆ ಪಟ್ಟಣದಷ್ಟು ರೋಮಾಂಚಕ ತಾಣ ಮತ್ತೊಂದಿಲ್ಲ.

ನಮ್ಮ ತಂಡದ ಮಾರ್ಗದರ್ಶಕಿ (ಗೈಡ್) ನಶಿಮಾ, ಚಾರಿತ್ರಿಕ– ಧಾರ್ಮಿಕ ಮಾಹಿತಿಯನ್ನು ನವಿರಾದ ಹಾಸ್ಯದೊಂದಿಗೆ ಒದಗಿಸುತ್ತಿದ್ದಳು. ನಮಗೋ ಜೀಸಸ್ ಸಮಾಧಿಯನ್ನು ನೋಡುವ ಆತುರ. 'ಖಂಡಿತ ನೋಡೋಣ ಆದರೆ ಅದಕ್ಕೂ ಮೊದಲು ಹಳೆಯ ಜೆರೂಸಲೇಮ್ ಸುತ್ತೋಣ' ಎಂದು ಒಂದು ದಿಕ್ಕಿನತ್ತ ಹೊರಡಿಸಿದಳು.

ಝಿಯಾನ್ ಗೇಟ್‌ನಿಂದ 'ಗೋಳು ಗೋಡೆ'ಯವರೆಗೂ ಹಳೆಯ ಜೆರೂಸಲೇಮ್ ವ್ಯಾಪಿಸಿದೆ. 1948ರ ಇಸ್ರೇಲ್ ಮತ್ತು ಅರಬ್ ಯುದ್ಧದಲ್ಲಿ ಪಟ್ಟಣದ ದೊಡ್ಡ ಭಾಗ ನಾಶವಾಗಿದ್ದರೂ, 1967ರಲ್ಲಿ ಪುನರ್ ನಿರ್ಮಿಸಲಾಯಿತು. ಇಲ್ಲಿರುವ 'ಆರ್ಕಿಯಾಲಾಜಿಕಲ್ ಪಾರ್ಕ್' ಇತಿಹಾಸ ಪ್ರಿಯರಿಗೆ ರಸದೌತಣ ಕೊಡುತ್ತದೆ. ಜೆರೂಸಲೇಮ್‌ಗೆ ಸಂಬಂಧಿಸಿದ ಸಾವಿರಾರು ವರ್ಷಗಳ ಪಳಿಯುಳಿಕೆಗಳು ಈ ಮ್ಯೂಸಿಯಂನಲ್ಲಿ ಕಾಣಸಿಗುತ್ತವೆ.

ಜೆರೂಸಲೇಮ್ ರಸ್ತೆಗಳು ವೈಭವೋಪೇತ ಹಾಗೂ ವರ್ಣರಂಜಿತ. ರಸ್ತೆಯ ಅಕ್ಕಪಕ್ಕದ ಮಳಿಗೆಗಳಲ್ಲಿ ಸ್ಮರಣಿಕೆಗಳು, ಆಲಿವ್, ಬದಾಮಿ, ಹಣ್ಣುಹಂಪಲು, ಖರ್ಜೂರ, ತರಹೇವಾರಿ ತಿಂಡಿಗಳು, ಉಡುಪು, ಒಂದೇ ಎರಡೇ! ಝಿಯಾನ್ ಗೇಟ್ ವೀಕ್ಷಿಸಿ, ಬಝಾರಿನ ಮುಖ್ಯ ರಸ್ತೆ ಪ್ರವೇಶಿಸಿದಾಗ ಬಣ್ಣಬಣ್ಣದ ಟೀಷರ್ಟ್ ಹಿಡಿದೊಬ್ಬ ಮಾರಾಟಗಾರ ಗಂಟುಬಿದ್ದ. ಜೆರೂಸಲೇಮ್ ಚಿತ್ರಣಗಳು ಅದರ ಮೇಲಿದ್ದವು. ಆದರೆ ಬೆಚ್ಚಿ ಬೀಳಿಸಿದ್ದು, ಗೂಗಲ್ ಸರ್ಚ್‌ನಲ್ಲಿ 'ಇಸ್ರೇಲ್' ಎಂದು ಟೈಪಿಸಿದಾಗ 'ಡಿಡ್ ಯೂ ಮೀನ್: ಪ್ಯಾಲೆಸ್ಟೈನ್?' ಎಂಬ ಮರುಪ್ರಶ್ನೆಯ ಚಿತ್ರಬರಹ! ಇಸ್ರೇಲ್‌ನ ಅಸ್ತಿತ್ವವನ್ನೇ ಪ್ರಶ್ನಿಸುವ ಸಾಲು ಅದು!

## ವಿಯಾ ದಲರೋಸಾ

ವಿಚಾರಣೆ ನಡೆದು, ಶಿಕ್ಷೆ ಪ್ರಕಟಗೊಂಡ ಬಳಿಕ ಏಸು ಕ್ರಿಸ್ತನು ಶಿಲುಬೆಯನ್ನು ಹೊತ್ತು ಮೌಂಟ್ ಆಫ್ ಆಲಿವ್ಸ್‌ವರೆಗೆ ನಡೆಯುತ್ತ ಹೋದ ದಾರಿಯೇ 'ವಿಯಾ ದಲರೋಸಾ' (ಯಾತನೆಯ ಹಾದಿ). ಆ ದಾರಿಯಲ್ಲಿಯೇ ನಡೆಯುತ್ತ ಹೋಗುವುದೊಂದು ವಿಶಿಷ್ಟ ಅನುಭವ. ಮಧ್ಯೆ ಮಧ್ಯೆ ಸುಸ್ತಾದಾಗ ಏಸು ವಿಶ್ರಾಂತಿ ಪಡೆದಿದ್ದೂ, ಒಮ್ಮೆ ಬಳಲಿದಾಗ ಪಕ್ಕದ ಬಂಡೆಯ ಮೇಲೆ ಕೈಯೂರಿದ್ದೂ ಪವಿತ್ರ ತಾಣಗಳ ಪಟ್ಟಿಗೆ ಸೇರಿವೆ.

ವೆಸ್ಟರ್ನ್ ವಾಲ್ ಪ್ಲಾಝಾ ಪ್ರವೇಶಿಸುತ್ತಿದ್ದಂತೆ, 'ನೀವೀಗ ಮೂರು ಪ್ರಮುಖ ಧರ್ಮಗಳ ಸಂಗಮತಾಣವನ್ನು ನೋಡಲಿದ್ದೀರಿ' ಎಂದು ನಶಿಮಾ ಪ್ರಕಟಿಸಿದಳು. ಆವರಣದೊಳಗೆ ಬಂದ ಬಳಿಕ, ಗೋಳು ಗೋಡೆ, ಏಸು ಸಮಾಧಿ ಕುರಿತು ಹತ್ತು ನಿಮಿಷ ವಿವರ ನೀಡಿ, 'ಈ ಎಲ್ಲವನ್ನೂ ನೋಡಿ ಮೂರು ತಾಸುಗಳ ಬಳಿಕ ಇಲ್ಲಿ ಬಂದು ಸೇರಬೇಕು' ಎಂಬ ನಿಬಂಧನೆ ವಿಧಿಸಿ, ಆಕೆ ಎತ್ತಲೋ ಹೋದಳು.

ಮೊದಲಿಗೇ ಎದುರಾಗಿದ್ದು 'ಗೋಳು ಗೋಡೆ'. ಅದಕ್ಕೆ ಹಣೆಹಚ್ಚಿ ಯಹೂದಿಗಳು ಮೌನವಾಗಿ ಪ್ರಾರ್ಥಿಸುತ್ತಲೋ, ದುಃಖಿಸುತ್ತಲೋ ನಿಂತ ದೃಶ್ಯ ಮನಕಲಕುತ್ತದೆ. ಮೂಲತಃ ಒಂದೂವರೆ ಸಾವಿರ ಅಡಿಗಳಷ್ಟಿದ್ದ ಗೋಳುಗೋಡೆಯಲ್ಲಿ ಈಗ ಉಳಿದಿರುವುದು ಬರೀ ಇನ್ನೂರು ಅಡಿಗಳಂತೆ! ಯಹೂದಿಯರ ಪಾಲಿಗೆ ಉಳಿದುಕೊಂಡ ಸ್ಥಾವರ ಇದೊಂದೇ.

ಏಸುವನ್ನು ಶಿಲುಬೆಗೆ ಏರಿಸಲಾಗುತ್ತದೆ. ಬಳಿಕ ಆತನ ಶರೀರವನ್ನು ಶಿಲೆಯೊಂದರ ಮೇಲೆ ಇಟ್ಟು, ಆಲಿವ್ ತೈಲ ಲೇಪಿಸಲಾಗುತ್ತದೆ. ಆ ಬಳಿಕ ಸಮಾಧಿ ಮಾಡಲಾಗುತ್ತದೆ. ಏಸು ಸಮಾಧಿಯ ಸ್ಥಳವೇ 'ಚರ್ಚ್ ಆಫ್ ಹೋಲಿ ಸೆಪಲ್ಕರ್'.

ಅಷ್ಟೇನೂ ಗದ್ದಲ ಇರದ ಏಸು ಸಮಾಧಿಯ ಮುಂದೆ ಮೇಣದಬತ್ತಿ ಹಚ್ಚಿಟ್ಟು ಪ್ರಾರ್ಥನೆ ಮಾಡುವವರು ನೂರಾರು ಜನ. ತೈಲ ಲೇಪಿಸಲು ಯೇಸುವಿನ ಶರೀರವಿಟ್ಟ ಶಿಲೆಗೂ ನಮಸ್ಕರಿಸುವ



ಯಹೂದಿಯರ ಪವಿತ್ರ ತಾಣ: 'ಗೋಳು ಗೋಡೆ' (ಪಶ್ಚಿಮ ಗೋಡೆ)



ಶಿಲುಬೆಯಿಂದ ಕೆಳಗಿಳಿಸಿದ ಬಳಿಕ ಏಸುವಿನ ಶರೀರ ಇಟ್ಟ ಈ ಶಿಲೆಯೂ ಪವಿತ್ರ